ಅಸಲು ದಾವೆ ಸಂಖ್ಯೆ- 312/2018
ಪಿಡಬ್ಲ್ಯೂ- 01
ದಿನಾಂಕಃ 14.12.2022
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎನ್ ಎಸ್ ಪಿ ವಕೀಲರಿಂದ

ನಾನು ನನ್ನ ತಂದೆಯ ಆಸ್ತಿಯಲ್ಲಿ ಪಾಲು ಕೇಳಿ ಈ ದಾವೆ ಮಾಡಿರುತ್ತೇನೆ. ದಾವೆಗೆ ಮಾಹಿತಿ ನಾನೇ ನೀಡಿದ್ದೇನೆ. ಚನ್ನಬಸಪ್ಪನಿಗೆ ಇಬ್ಬರು ಹೆಂಡತಿಯರು ಇದ್ದರು ಅಂತಾ ವಂಶಾವಳಿ ಕೊಟ್ಟಿದ್ದೇನೆ. ಚನ್ನಬಸಪ್ಪನ ಮೊದಲನೇ ಹೆಂಡತಿ ಗಂಗವ್ವ, ಅವಳಿಗೆ ಮಕ್ಕಳು ಇರಲಿಲ್ಲ. ಚನ್ನಬಸಪ್ಪನ ಎರಡನೇ ಹೆಂಡತಿ ನಾಗವ್ವ. ಚನ್ನಬಸಪ್ಪ ನಾಗವ್ವಳನ್ನು ಯಾವಾಗ ಮದುವೆ ಆಗಿದ್ದ ನನಗೆ ಗೊತ್ತಿಲ್ಲ. ಚನ್ನಬಸಪ್ಪ ನಾಗವ್ವಳನ್ನು ಯಾವಾಗ ಮದುವೆ ಆದ ಅಂತಾ ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ನಾಗವ್ವ ಮೊದಲು ಚನ್ನಪ್ಪ ಎನ್ನುವವರನ್ನು ಮದುವೆಯಾಗಿದ್ದಳು. ನಾಗವ್ವ 2011 ರಲ್ಲಿ ತೀರಿಕೊಂಡಿರುತ್ತಾಳೆ ಎನ್ನುವುದು ಸರಿ. ಚನ್ನಬಸಪ್ಪನ ಹೆಂಡತಿ ಗಂಗವ್ವ 2013 ರಲ್ಲಿ ತೀರಿಕೊಂಡಿರುತ್ತಾಳೆ ಎನ್ನುವುದು ಸರಿ. ಚನ್ನಬಸಪ್ಪ 1998 ರಲ್ಲಿ ತೀರಿಕೊಂಡಿರುತ್ತಾನೆ ಎನ್ನುವುದು ಸರಿ. ಚನ್ನಪ್ಪ ಮತ್ತು ನಾಗವ್ವ ಇವರಿಗೆ ಒಬ್ಬ ಗಂಡು ಮಗ ಮತ್ತು ಒಬ್ಬ ಹೆಣ್ಣು ಮಗಳು ಇದ್ದರು. ಸರೋಜಿನಿ ಇವಳು ಚನ್ನಪ್ಪ ಮತ್ತು ನಾಗವ್ವ ಇವರ ಮಗಳು ಎಂದರೆ ಸರಿ. ಸದರಿ ಸರೋಜಿನಿಯವರನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ, ಅವಳು ನಮ್ಮ ತಂದೆಗೆ ಸಂಬಂಧ ಇಲ್ಲ, ಆದ್ದರಿಂದ ಸೇರಿಸಿಲ್ಲ. ಚನ್ನಬಸಪ್ಪ ಮತ್ತು ಗಂಗವ್ವ ಇವರಿಗೆ ಮಕ್ಕಳಾಗದ ಕಾರಣ ಪ್ರತಿವಾದಿ ರಾಮೇಶ್ವರನನ್ನು ದತ್ತಕ ತೆಗೆದುಕೊಂಡಿದ್ದರು ಎಂದರೆ ಸರಿ. ಸದರಿ ದತ್ತಕ ಪತ್ರ ನೊಂದಣಿಯಾಗಿರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ ಚನ್ನಬಸಪ್ಪನ ಮರಣಾ ನಂತರ ದತ್ತಕ ಮಗ ರಾಮೇಶ್ವರ ಅವನ ಆಸ್ತಿಗಳನ್ನು ತನ್ನ ಹೆಸರಿಗೆ ವರ್ಗಾವಣೆ ಮಾಡಿಕೊಂಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. 1999 ರಿಂದ ಇಲ್ಲಿಯವರೆಗೆ ದಾವಾ ಆಸ್ತಿಗಳು ಪ್ರತಿವಾದಿ ಹೆಸರಿನಲ್ಲಿರುತ್ತವೆ ಎನ್ನುವುದು ಸರಿ. ಪ್ರತಿವಾದಿಯ ಹೆಸರು ಕಡಿಮೆ ಮಾಡಬೇಕು ಅಂತಾ ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿ ಮೇಲ್ಮನವಿ ಸಲ್ಲಿಸಿಲ್ಲ. 1999 ರಿಂದ ಇಲ್ಲಿಯವರೆಗೆ ದಾವಾ ಆಸ್ತಿಗಳನ್ನು ಪ್ರತಿವಾದಿ ಕಬ್ಜಾ ವಹಿವಾಟಿ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನನ್ನ ಕಬ್ಜಾ ವಹಿವಾಟಿಯಲ್ಲಿರುತ್ತವೆ ಅಂತಾ ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ. ನನ್ನ ತಂದೆ ಜೀವಂತ ಇರುವಾಗ ಆಸ್ತಿಗಳನ್ನು ನಮಗೆ ಸಾಗುವಳಿ ಮಾಡಲು ಕೊಟ್ಟಿದ್ದರು, ಆದ್ದರಿಂದ ನಾವೇ ಸಾಗುವಳಿ ಮಾಡುತ್ತಿದ್ದೆವು. ನನ್ನ ತಂದೆ ಎಂದಿಗೂ ದಾವಾ ಆಸ್ತಿಗಳನ್ನು ಸಾಗುವಳಿ ಮಾಡಲು ಕೊಟ್ಟಿಲ್ಲ ಎಂದರೆ

ಸರಿಯಲ್ಲ. ನಾನು ತವರಮೆಳ್ಳಿಹಳ್ಳಿ ಗ್ರಾಮದಲ್ಲಿ ಹುಟ್ಟಿರುತ್ತೇನೆ. ನನ್ನ ಜನನ ಪ್ರಮಾಣಪತ್ರ ಹಾಜರುಪಡಿಸಿದ್ದೇನೆ. ನಾನು ಹುಟ್ಟಿದಾಗ ನನ್ನ ತಂದೆ ಜನನ ರಿಜಿಸ್ಟರನಲ್ಲಿ ದಾಖಲು ಮಾಡಿರುತ್ತಾರೆ. ಈ ದಾವೆ ದಾಖಲಾದ ನಂತರ ಕ್ರಿಮಿನಲ್ ಮಿಸಲೆನಿಯಸ್ ನಂ.92/2019 ನ್ನು ದಾಖಲಿಸಿ ಜನನ ಪ್ರಮಾಣಪತ್ರ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನ್ಯಾಯಾಲಯಕ್ಕೆ ತಪ್ಪು ತಿಳುವಳಿಕೆ ಕೊಟ್ಟು ನನ್ನ ತಂದೆಯ ಹೆಸರು ಚನ್ನಬಸಪ್ಪ ಅಂತಾ ನೊಂದಣಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಶಾಲಾ ದಾಖಲಾತಿಗೆ ಯಾರು ಮಾಹಿತಿ ಕೊಟ್ಟು ನನ್ನ ಹೆಸರು ನೊಂದಣಿ ಮಾಡಿಸಿರುತ್ತಾರೆ ಎಂದರೆ ನನ್ನ ತಂದೆಯೇ ನನ್ನನ್ನು ಶಾಲೆಗೆ ದಾಖಲು ಮಾಡಿರುತ್ತಾರೆ. ನನ್ನ ತಂದೆಯೇ ನನ್ನನ್ನು ಶಾಲೆಗೆ ದಾಖಲಿಸಿರುತ್ತಾರೆ ಅಂತಾ ತೋರಿಸಲು ದಾಖಲೆಗಳನ್ನು ತೆಗೆಸಿರುತ್ತೇನೆ. ಸದರಿ ದಾಖಲೆಗಳು ನನ್ನ ಹತ್ತಿರ ಇರುವುದಿಲ್ಲ. ಶಾಲಾ ದಾಖಲಾತಿ ನಿಪಿ-5 ರಲ್ಲಿ ನನ್ನ ತಾಯಿ ಹೆಸರು ನಮೂದಿಸಿಲ್ಲ ಎಂದರೆ ಸರಿ. ಎಷ್ಟನೇ ಇಸ್ವಿಯಲ್ಲಿ ನನ್ನನ್ನು ಶಾಲೆಗೆ ದಾಖಲು ಮಾಡಿರುತ್ತಾರೆ ಎಂದರೆ 1978 ರಲ್ಲಿ ದಾಖಲಿಸಿರುತ್ತಾರೆ. ನಾನು ಶಾಲೆ ಸಿಬ್ಬಂದಿಯೊಂದಿಗೆ ಮೀಲಾಪಿಯಾಗಿ ನನ್ನ ತಂದೆ ಹೆಸರು ಚನ್ನಬಸಪ್ಪ ಅಂತಾ ಸುಳ್ಳು ಬರೆಸಿ ನಿಪಿ-5 ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಚನ್ನಬಸಪ್ಪನ ಮಗಳು ಅಂತಾ ತೋರಿಸಲು ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ಚನ್ನಪ್ಪ ಮತ್ತು ನಾಗವ್ವಳ ಮಕ್ಕಳಲ್ಲಿ ನಾನು ಒಬ್ಬಳು ಎಂದರೆ ಸರಿಯಲ್ಲ, ನಾನು ಚನ್ನಪ್ಪನನ್ನು ನೋಡಿಯೇ ಇಲ್ಲ. ನಾನು ಚನ್ನಬಸಪ್ಪ ಮತ್ತು ನಾಗವ್ವ ಇವರ ಮಗಳು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇವತ್ತಿನವರೆಗೂ ದಾವಾ ಆಸ್ತಿಗಳನ್ನು ಪ್ರತಿವಾದಿ ವಹಿವಾಟು ಮಾಡುತ್ತಾ ಬಂದಿರುತ್ತಾನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಈ ನ್ಯಾಯ ಬಂದಾಗಿನಿಂದ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದಾನೆ ಅಂತಾ ನುಡಿಯುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.